550(130) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಲಾಲ್‌ಬಾಗ್‌ಗೆ ಪ್ರತಿದಿನ ಬರತಕ್ಕ ಪ್ರವಾಸಿಗರು ಹಾಗೂ ವಾಯು ವಿಹಾರಕ್ಕೆ ಬೆಳಿಗ್ಗೆ ಮತ್ತು ಸಂಜೆ ವೇಳೆ ಬರತಕ್ಕ ಜನರ ಸಂಖ್ಯೆ ಎಷ್ಟು;

ಆ) ಲಾಲ್‌ಬಾಗ್‌ನ ಕುಡಿಯುವ ನೀರು, ಶೌಚಾಲಯ ಹಾಗೂ ಇತರ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಉದ್ಯಾನವನದಲ್ಲಿ ಮಕ್ಕಳಿಗಾಗಿ ಪ್ರತ್ಯೇಕ, ಸಂಗೀತಕಾರಂಜಿ, ಕೆರೆಯಲ್ಲಿ ದೋಣಿ ಸೌಲಭ್ಯ ಇತ್ಯಾದಿ ವ್ಯವಸ್ತೆಯನ್ನು ಮಾಡಲು ಸರ್ಕಾರ ಆಲೋಚಿಸಿದೆಯೇ;

ಈ) ಲಾಲ್‌ಬಾಗ್ ಬರತಕ್ಕ ಪ್ರವಾಸಿಗರಿಗೆ ವಿಧಿಸುತ್ತಿರುವ ಪ್ರವೇಶ ಶುಲ್ಕವೆಷ್ಟು ಹಾಗೂ ಇದರಿಂದ ಪ್ರತಿವರ್ಷ ಬರತಕ್ಕ ಸರಾಸರಿ ಹಣವೆಷ್ಟು;

ಉ) ಈ ಲಾಲ್‌ಬಾಗ್‌ಗೆ ವಾಯು ವಿಹಾರಕ್ಕಾಗಿ ಬರತಕ್ಕವರಿಗೂ ಸಹ ಪ್ರವೇಶ ಶುಲ್ಕ ವಿಧಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಲಾಲ್‌ಬಾಗ್‌ನಲ್ಲಿ ನಾಯಿಗಳ ಕಾಟ ಜಾಸ್ತಿಯಾಗಿದ್ದು ಅದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದೇ/

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು)

ಅ) ಲಾಲ್‌ಬಾಗ್ ಸಸ್ಯತೋಟಕ್ಕೆ ಪ್ರತಿದಿನ ಸರಾಸರಿ 6,000 ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ ಮತ್ತು ಅಂದಾಜು 4,000 ದಿಂದ 5,000 ಜನರು ವಾಯು ವಿಹಾರಕ್ಕೆ ಪ್ರತಿದಿನ ಬರುತ್ತಿರುತ್ತಾರೆ.

ಆ) ಲಾಲ್‌ಬಾಗ್ ಸಸ್ಯ ತೋಟದಲ್ಲಿ 6 ಸ್ಥಳಗಳಲ್ಲಿ ಕುಡಿಯುವ ನೀರು ಸ್ಥಾವರಗಳ ಸೌಕರ್ಯ ಇರುತ್ತದೆ ಇದರ ಜೊತೆಗೆ, ಬಿ.ಡಿ.ಎ. ವತಿಯಿಂದ ಉನ್ನತ ತಾಂತ್ರಕತೆಯ Zero B (ಶುದ್ಧೀಕರಿಸಿದ) ಕುಡಿಯುವ ನೀರಿನ 5 ಸ್ಥಾವರಗಳನ್ನು ನಿಮಾಣ ಮಾಡಿದ್ದು ಇವುಗಳಿಂದ ಸಹ ಸಾರ್ವಜನಿಕರಿಗಾಗಿ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲಾಗಿರುತ್ತದೆ.

ಲಾಲ್‌ಬಾಗ್ ಸಸ್ಯತೋಟದಲ್ಲಿ ಈಗಾಗಲೇ ಎರಡು ಸಾರ್ವಜನಿಕ ಶೌಚಾಲಯಗಳು ಇರುತ್ತದೆ. ಇನ್ನೂ ನಾಲ್ಕು ಶೌಚಾಲಯಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ನಿರ್ಮಿಸಲು ಉದ್ದೇಶಿಸಿದೆ.

ಇ) ಇಲ್ಲ

ಈ) ಲಾಲ್‌ಬಾಗ್‌ಗೆ ಬರತಕ್ಕ ಪ್ರವಾಸಿಗರಿಗೆ ರೂ. 5/– ಪ್ರವೇಶ ಶುಲ್ಕವನ್ನು ವಿಧಿಸಲಾಗುತ್ತಿದೆ. ಹಾಗೂ ಕಳೆದ ಮೂರು ವರ್ಷಗಳಿಂದ ಸರಾಸರಿ ಒಂದು ವರ್ಷಕ್ಕೆ ರೂ. 64.00 ಲಕ್ಷಗಳು (ರೂ. ಅರವತ್ನಾಲ್ಕು ಲಕ್ಷಗಳು ಮಾತ್ರ) ಆದಾಯವಿರುತ್ತದೆ.

ಉ) ಸದ್ಯಕ್ಕೆ ಇಲ್ಲ.

ಊ) ಹೌದು, ಲಾಲ್‌ಬಾಗ್‌ನೊಳಗೆ ನುಸುಳಿ ಬರುವ ಬೀದಿ ನಾಯಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಹಿಡಿದು ನಿರ್ವಹಿಸಲಾಗುತ್ತಿದೆ.

551(134) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ ರಚಿಸಲಾದ ಸ್ವಸಹಾಯ ಗುಂಪುಗಳೆಷ್ಟು ಹಾಗೂ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಈ ಸ್ವಸಹಾಯ ಗುಂಪುಗಳಿಗೆ ನೀಡಿದ ಧನ ಸಹಾಯವೆಷ್ಟು;

ಆ) ಈ ಗುಂಪುಗಳು ಇಲ್ಲಿಯವರೆಗೆ ಮಾಡಿರುವ ಉಳಿತಾಯದ ಹಣವೆಷ್ಟು;

ಇ) 2004–05ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ಸ್ವಸಹಾಯ ಗುಂಪುಗಳನ್ನು ರಚಿಸಲಾಯಿತು ಹಾಗೂ ಸರ್ಕಾರ ಇಲ್ಲಿಯವರಿಗೆ 2004–05ರಲ್ಲಿ ನೀಡಿದ ಧನ ಸಹಾಯವೆಷ್ಟು;

ಈ) ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಪ್ರಾರಂಭಿಸದೆ ಇರಲು ಕಾರಣಗಳೇನು?

ಉ) ಸ್ತ್ರೀಶಕ್ತಿ ಯೋಜನೆಗೆ 2004–05ರಲ್ಲಿ ಹೆಚ್ಚಿನ ಹಣ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

ಊ) ಈ ಗುಂಪುಗಳು ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಸ್ತ್ರೀಶಕ್ತಿ ಯೋಜನೆಯಡಿ 1.00 ಲಕ್ಷ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ಹಾಗೂ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಪ್ರತಿ ಗುಂಪಿಗೆ ರೂ. 5000/– ದಂತೆ ಸುತ್ತು ನಿಧಿಯ ರೂಪದಲ್ಲಿ ನೀಡಿದ ಸಹಾಯ ಧನ ರೂ. 3300.60 ಲಕ್ಷಗಳಾಗಿವೆ.

ಆ) ಈ ಗುಂಪುಗಳು ಇಲ್ಲಿಯವರೆಗೆ ರೂ. 240.73 ಕೋಟಿ ಉಳಿತಾಯ ಮಾಡಿರುತ್ತದೆ.

ಇ) 2004–05ನೇ ಸಾಲಿನಲ್ಲಿ ಹೊಸದಾಗಿ ಸ್ವಸಹಾಯ ಗುಂಪುಗಳನ್ನು ರಚಿಸಿರುವುದಿಲ್ಲ. 2004–05ನೇ ಸಾಲಿನಲ್ಲಿ ಇಲ್ಲಿಯವರೆಗೆ 22053 ಗುಂಪುಗಳಿಗೆ ರೂ. 1102.65 ಲಕ್ಷ ಸುತ್ತು ನಿಧಿಯನ್ನು ಸಹಾಯಧನದ ರೂಪದಲ್ಲಿ ನೀಡಲಾಗಿದೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಡಿಸೆಂಬರ್ 2004ರ ಅಂತ್ಯಕ್ಕೆ ಒಟ್ಟು 4235 ನಗರ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಿದ್ದು ಈ ಕಾರ್ಯಕ್ರಮಕ್ಕೆ ರೂ. 65.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಈ) ಸರ್ಕಾರದ ವತಿಯಿಂದ ಬ್ಯಾಂಕ್ ಸ್ಥಾಪನೆಗೆ ಪ್ರಸ್ತಾವನೆಯನ್ನು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾಗೆ ಸಲ್ಲಿಸಲಾಗಿತ್ತು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ